ಎಂದೇನೂ ಇಲ್ಲ! ಒಂದು ವೇಳೆ ಒಪ್ಪಿದರೂ ನೀನು ನಡು ಹರಯಕ್ಕೆ ಬಂದುಬಿಟ್ಟಿರುತ್ತೀಯ; ಆಗ ಸಂಸಾರದ ಜಂಜಾಟವೇ ಬೇಡವೆನ್ನಿಸಿಬಿಡಬಹುದು. ನೀನು ನನ್ನ ಮಾತನ್ನೇ ಕೇಳಬೇಕು, ಒಪ್ಪಿಬಿಡಬೇಕು ಎಂದು ಖಂಡಿತ ಒತ್ತಾಯಿಸುವುದಿಲ್ಲ. ಒಂದು ಕೆಲಸ ಮಾಡು, ನಿನ್ನ 'ಮೆಂಟರ್ ಗುರು' ಇದ್ದಾರಲ್ಲ – ಶ್ರೀಧರಮೂರ್ತಿಗಳು, ಅವರನ್ನೇ ಕೇಳು. ತಂದೆ ಇಲ್ಲದ ನಮಗೆ ತಂದೆಯಂತೆ ಇದ್ದವರು ಅವರು. ಅಮ್ಮನಿಗೂ ಅವರ ಮೇಲೆ ಎಷ್ಟೊಂದು ಪ್ರೀತಿ ಗೌರವ ಇತ್ತು ಗೊತ್ತಲ್ಲ ನಿನಗೆ?"

★★★

ಆರೆಂಟು ತಿಂಗಳೇ ಕಳೆದಿವೆ – ಸಮ್ಮತಿ ದೊಡ್ಡಮ್ಮನ ಮನೆಗೆ ಹೋಗಿ. ತುಂಬಾ ಖುಷಿಯಾಗಿ ಇದ್ದಾಳೆ ಎನ್ನುವುದು ಸಮಾಧಾನದ ಸಂಗತಿ ಪರಿಣತಿಗೆ. ಆದರೆ, ಮೊದಮೊದಲು ನಿತ್ಯವೂ ಬರುತ್ತಿದ್ದ ಫೋನು ಕ್ರಮೇಣ ವಾರಕ್ಕೊಮ್ಮೆಯಾಗಿ, ಈಗ ತಿಂಗಳಿಗೆ ಎರಡಕ್ಕೆ ಇಳಿದಿದೆ, ಅದೂ ದೊಡ್ಡಮ್ಮನ ಒತ್ತಾಯಕ್ಕೆ! ಮೊನ್ನೆ ಒಂದು ವಾರದ ರಜೆಗೆಂದು ಬಂದವಳು ತಾಯಿಗೆ ತಾಕೀತು ಮಾಡಿಹೋಗಿದ್ದಾಳೆ – ತನಗೆ ಹೋಂ ವರ್ಕ್ ಅದು ಇದು ಇರುತ್ತದೆ; ಬಿಡುವಾದಾಗ, ಹೇಳಲೇ ಬೇಕಾದ ವಿಷಯವಿದ್ದಾಗ, ತಾನೇ ಫೋನ್ ಮಾಡುತ್ತಾಳಂತೆ; ಇವಳು ಸುಮ್ಮಸುಮ್ಮನೆ ಫೋನ್ ಮಾಡಿ, ದೊಡ್ಡಮ್ಮನಿಗೆ ಕೆಲಸ ಮಾಡಿಕೊಡು, ತನ್ಮಯಿ ಜೊತೆ ಜಗಳ ಕಾಯಬೇಡ, ಈ ಬಾರಿ ಕ್ಲಾಸಿಗೆ ಫಸ್ಟ್ ಬರಬೇಕು ಹಾಗೆ ಹೀಗೆ ಎಂದೆಲ್ಲ ಉಪದೇಶ ಕೊಡಬಾರದಂತೆ... 'ದೊಡ್ಡಮ್ಮ, ನಿನಗಿಂತಲೂ ಹೆಚ್ಚು ಪ್ರೀತಿ ಕಾಳಜಿಯಿಂದ ನೋಡಿಕೊಳ್ಳುತ್ತಿದ್ದಾರೆ. ಸುಮ್ಮನೆ ಏನೇನೋ ಯೋಚಿಸಿಕೊಂಡು ಹೇಳಿದ್ದನ್ನೇ ಹೇಳಿ ತಲೆ ತಿನ್ನಬೇಡ.'

ಪರಿಣತಿಗೆ ಮಗಳ ಇಂತಹ ಮಾತುಗಳನ್ನು ಕೇಳಿ ಮೊದಮೊದಲು ಬೇಸರವಾಗುತ್ತಿತ್ತು. ಈಗ ಅಭ್ಯಾಸವಾಗಿದೆ. ತನ್ನ ಮಗಳು ಅದೆಷ್ಟು ಬೇಗ ದೊಡ್ಡವಳಾಗಿಬಿಟ್ಟಳಲ್ಲ – ಎಂದು ಹೆಮ್ಮೆಯೂ ಜೊತೆಗೆ ಆತಂಕವೂ ಆಗುತ್ತದೆ.

ಮೊದಮೊದಲು ಮಗಳು ಇಲ್ಲದೆ ಮನೆಯೆಲ್ಲ ಖಾಲಿ ಖಾಲಿ ಅನ್ನಿಸಿ ಪರಿಣತಿಯನ್ನು ಖಿನ್ನತೆ ಆವರಿಸಿದ್ದು ನಿಜವೇ ಆದರೂ ಕ್ರಮೇಣ ಅದಕ್ಕೆ ಅವಳು ಹೊಂದಿಕೊಂಡುಬಿಟ್ಟಿದ್ದಳು. ಎಂದಿಗಿಂತಲೂ ಈಗ ಹೆಚ್ಚು ಕತೆ ಕಾದಂಬರಿಗಳನ್ನು ಓದುತ್ತಾಳೆ; ನೆಟ್ಟಿನಲ್ಲಿ ಒಳ್ಳೆಯ ಸಿನಿಮಾಗಳನ್ನು ಆಯ್ಕೆ ಮಾಡಿಕೊಂಡು ನೋಡುತ್ತಾಳೆ. ಆಫೀಸಿನಲ್ಲಿ ದಣಿವರಿಯದೆ ಲವಲವಿಕೆಯಿಂದ ಸಂಜೆಯವರೆಗೂ ಕೆಲಸ ಮಾಡುತ್ತಾಳೆ. ಮೊದಲಿನಂತೆ ಮನೆಗೆ ಹೋಗುವ ಧಾವಂತ ತೋರದೆ, ವಿರಾಮದಲ್ಲಿ ಸಹೋದ್ಯೋಗಿಗಳೊಂದಿಗೆ ಸಮಯ ಕಳೆಯುತ್ತಾಳೆ. ಹೀಗೆ ನವೋತ್ಸಾಹ ತುಂಬಿ ಉಕ್ಕುವ ಅವಳ ಚೈತನ್ಯವನ್ನು, ಯಾರೂ ಗಮನಿಸಬಹುದಾಗಿತ್ತು. ಉಡುಗೆ ತೊಡುಗೆಗಳಲ್ಲಿ, ಮೈ–ಮುಖದ ಅಂದ–ಅಲಂಕಾರದಲ್ಲಿ ವಿಶೇಷ ಆಸಕ್ತಿಯು ಬಂದಿದೆ ಅವಳಿಗೆ. ಹಿಂದೆ ತಾನು ಓದುತ್ತಿದ್ದ ಪುಸ್ತಕಗಳು, ನೋಡುತ್ತಿದ್ದ ಸಿನಿಮಾಗಳು ಕೂಡ ಇದೀಗ ಬದಲಾಗಿವೆ. ಒಮ್ಮೊಮ್ಮೆ ರಾತ್ರಿ ಬೀಳುವ ಕನಸುಗಳನ್ನು ಬೆಳಗ್ಗೆ ನೆನಪು ಮಾಡಿಕೊಂಡು ನಾಚುವುದುಂಟು–ಅವಳು. ಹೀಗೆ ಒಂದೇ ಕನಸು ಅನೇಕ ಬಾರಿ ಕಾಣಿಸಿಕೊಂಡು ಅವಳ ಮನಸ್ಸನ್ನು ತಲ್ಲಣಗೊಳಿಸಿದ್ದೂ ಉಂಟು...

ಆಕಾಶದಲ್ಲಿ ಕ್ಷಣ ಕ್ಷಣವೂ ಬೇರೆ ಬೇರೆ ರೂಪ ತಳೆಯುತ್ತ ತೇಲುತ್ತಿವೆ ಬಿಳಿ ಮೋಡಗಳು! ಅದೆಲ್ಲಿಂದಲೋ ನವಿಲೊಂದು ಓಡುತ್ತ ಬಂದು ಇವಳ ಎದುರೇ ಗರಿಬಿಚ್ಚಿ ಕುಣಿಯತೊಡಗುತ್ತದೆ... ಉದ್ದನೆಯ ನೀಲಿ ಕೊರಳನ್ನು ಮುಗಿಲಿಗೆ ಎತ್ತಿದೆ... ಇನ್ನೇನು ಕೇಕೆ ಹಾಕಬೇಕು – ಆಕಾಶವೆಲ್ಲಾ ಖಾಲಿ ಖಾಲಿ! ಅಂಗೈ ಅಗಲದಷ್ಟೂ ಕಪ್ಪು ಮೋಡವಿಲ್ಲ! ತೆರೆದ ಕೊಕ್ಕು ತೆರೆದ ಹಾಗೇ ಇದೆ... ಬಿಚ್ಚಿದ ಗರಿಗಳು ಮೆಲ್ಲನೆ ಮುದುರುತ್ತವೆ... ಕುಣಿಯುತ್ತಿದ್ದ ಕಾಲುಗಳಿಗೆ ಲಕ್ವ ಹೊಡೆದಂತಾಗಿ ಅದು